(ಇಂದು ದಿನಾಂಕಃ 07-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ BS ವಕೀಲರಿಂದಃ**

ನಾನು ಹುಟ್ಟಿನಿಂದ ಚಿಂಚೋಳಿಯಲ್ಲಿ ವಾಸ ಇರುತ್ತೇನೆ. ನಾನು ಹೀರಾಸಿಂಗನನ್ನು ನೋಡಿರುತ್ತೇನೆ. ಹೀರಾಸಿಂಗ ಚಿಂಚೋಳಿಯವನು. ಹೀರಾಸಿಂಗನ ಮೂಲ ಊರು ಬೀದರ ಜಿಲ್ಲೆಯ ನಿಡುವಂಚಿ ಗ್ರಾಮ ಎಂದರೆ ಸರಿ. ಅದನ್ನು ತೊರೆದು ಚಿಂಚೋಳಿಯಲ್ಲಿ ಬಂದು ವಾಸ ಇದ್ದ ಎಂದರೆ ಸರಿ. ಹೀರಾಸಿಂಗ ತಾನು ಬದುಕಿರುವವರೆಗೂ ಟೇಲರಿಂಗ ವೃತ್ತಿಯನ್ನು ಮಾಡುತ್ತಿದ್ದ ಎಂದರೆ ಸರಿ. ದಾವಾ ಸ್ವತ್ತುಗಳನ್ನು ಹೀರಾಸಿಂಗ ಚಿಂಚೋಳಿಗೆ ಬಂದ ನಂತರ ಅವುಗಳನ್ನು ಖರೀದಿ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳ ಮೂಲ ಮಾಲೀಕರು ಶೇಷು ಸಿಂಗ ತಂದೆ ಬಿಕ್ಕು ಸಿಂಗ ಇದ್ದರು ಎಂದರೆ ನನಗೆ ಗೊತ್ತಿಲ್ಲ. 1976 ರಲ್ಲಿ ಹೀರಾಸಿಂಗ ದಾವಾ ಸ್ವತ್ತುಗಳನ್ನು ಮೂಲ ಮಾಲೀಕ ಶೇಷು ಸಿಂಗ ತಂದೆ ಬಿಕ್ಕು ಸಿಂಗ ರವರಿಂದ ಕ್ರಯ ಪಡೆದಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

ಹೀರಾಸಿಂಗಗೆ ಮೂವರು ಮಕ್ಕಳು ಎಂದರೆ ಸರಿ. ಪ್ರತಾಪ ಸಿಂಗ, ಹನುಮಾನ ಸಿಂಗ, ಪೃಥ್ವಿ ರಾಜ ಸಿಂಗ ಎಂದರೆ ಸರಿ. ಹೀರಾಸಿಂಗ ಆಸ್ತಿಗಳನ್ನು ತನ್ನ ಮಕ್ಕಳಿಗೆ ನೀಡದೆ ನೇರವಾಗಿ 1ನೇ ಪ್ರತಿವಾದಿ ಅಮಿತ ಸಿಂಗ ಗೆ ದಾನದ ರೂಪದಲ್ಲಿ ನೀಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಹೀರಾಸಿಂಗನ ಸ್ವಂತ ಆಸ್ತಿ ಇದ್ದ ಕಾರಣ ಆತನ ಮಕ್ಕಳು ದಾನ ಮಾಡಿದ ಆಸ್ತಿಗಳಲ್ಲಿ ಪಾಲು ವಿಭಾಗ ಕೇಳಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ಹಿರಿಯರ ಆಸ್ತಿಗಳು ಎಂದು ನನ್ನ ಸಾಕ್ಷಿ ಪ್ರಮಾಣದಲ್ಲಿ ಬರೆದ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮನೆಯಲ್ಲಿ ಮೋನಪ್ಪ ಬಡಿಗೇರ ವಾಸ ಇದ್ದಾನೆ ಎಂದರೆ ಸರಿ. ಈ ನ್ಯಾಯಾಲಯದಿಂದ ಡಿಕ್ರಿ ಪಡೆದು ಆ ದಾವಾ ಸ್ವತ್ತಿನ ಮನೆಯಲ್ಲಿ ಮೋನಪ್ಪ ಬಡಿಗೇರ ವಾಸ ಇದ್ದಾನೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ವಾದಿ ಮತ್ತು ಪ್ರತಿವಾದಿಗಳು ಜಂಟಿ ಮಾಲೀಕರು ಇರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಜಂಟಿಯಾಗಿ ಉಳುಮೆ

ಮಾಡುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರವರು ಅಲ್ಪ ವಯ ಇದ್ದಾಗ ಅವರ ತಂದೆ ಹನುಮಾನ ಸಿಂಗ ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆತನು ವಯಸ್ಕನಿದ್ದನು. ಆತನು ಅಲ್ಪ ವಯ ಇದ್ದಾಗ ಆತನ ಹೆಸರಿಗೆ ಅಜ್ಞಾನ ಸಂರಕ್ಷಕರಾದ ಆತನ ಅಜ್ಜಿ ಹೆಸರಿಗೆ ಹೀರಾಸಿಂಗ ದಾನ ಪತ್ರ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.